Regd No M 1299 34 th Year ತಾ|| 28—7—51

SATYAVADI

ಸತ್ಯವಾದಿ

ಸ್ಥಾಪಕರು- ಅದಮನೆ ಸಿರಸ್ತೆದಾರ್ ಎಂ. ಎ. ಸುಬ್ರಾಯರು [ಬಿಡಿ ಪ್ರತಿ 3 ನೈ

ಪಾಕಿಸ್ತಾನಕ್ಕೆ ಕಾಶ್ಮೀರ ಮಂತ್ರಿಯ ಎಚ್ಚರಿಕೆ

ಪಾಕಿಸ್ತಾನವೇನಾದರು ಕಾಶ್ಮೀರವನ್ನು ಧಾಳಿ ನೂಡಹೋದರೆ ಭಾರಿ ಪರ್ವತಕ್ಕೆ ಅದರ ತಲೆಯುನ್ನು ಬಡಿದುಕೊಂಡಂತಾಗುವದು. ಪಾಕಿಸ್ತಾನ ಕಾಶ್ಮೀರದ ಸ್ವಲ್ಪ ಪ್ರದೇಶ ಪಡೆಯಹೋದರು. ಪಾಕಿಸ್ತಾನ ತನ್ನ ಪ್ರದೇಶದ ಸಹ ಸ್ರಾರು ಮೈಲು ಪ್ರದೇಶ ಕಳೆದುಕೊಳ್ಳಬೇಕಾದೀತು — ಎಂದು ಕಾಶ್ಮೀರದ ಉಪಮುಖ್ಯ ಮಂತ್ರಿ ಭಕ್ಷಿ ಗುಲಾಂ ಮಹಮದ್ ಮೊನ್ನೆ ಶ್ರೀನಗರದಲ್ಲಿ ತಿಳಿಸಿದ್ದಾರೆ.

ಗೂರ್ಖಾಗಳಿಗೆ ಚಿತಾವಣೆ ?

ಭಾರತ ನೇಪಾಳ ಸ್ನೇಹವನ್ನು ನಾಶ ಮಾಡಿದೆ — ಎಂಬ ಪ್ರಚಾರದಿಂದ ಗೂರ್ಖಾಗಳನ್ನು ತಮ್ಮೊಡನೆ ಸೇರಲು ಪಾಕಿಸ್ತಾನ ಚಿತಾವಣೆ ಮಾಡುತ್ತಿರುವದಾಗಿ ಬಿಬಿಸಿಯಿಂದ ವಾರ್ತೆ.

— ಕಾಂಗ್ರೆಸ್ ಈಗಾಗಲೆ ಒಡೆದು ಹೋಗಿದೆ ಎಂದು ರಫಿ ಅಹಮದ್ ಕಿದ್ವಾಯಿ ತಿಳಿಸಿದ್ದಾರೆ.

— ಚಿಯಾಂಗ್ ಕೈಷೇಕರೊಡನೆ ಜಪಾನ್ ಶಾಂತಿ ಒಪ್ಪಂದ ಮಾಡಿಕೊಳ್ಳುವದಂತೆ !

ಬಹಿರಂಗ ಸಭೆ

ನಾಳೆ ಸಂಜೆ 6 ಗಂಟೆಗೆ ಮೈಸೂರು ಪುರಭವನದಲ್ಲಿ ಮೈಸೂರು ಜನತಾ ಪಾರ್ಟಿಯ ಬಹಿರಂಗ ಸಭೆ ಏರ್ಪಾಟಾಗಿದೆ.

ಮೈಸೂರು ಮಹಾರಾಜರ ಸ್ವಾಗತಕ್ಕೆ ಸಿದ್ಧತೆ

ಮೈಸೂರು ಮಹಾರಾಜರು ಕರ್ನಾಟಕ ವಿಶ್ವವಿದ್ಯಾನಿಲಯದ ಪದವೀದಾನ ಮಹೋತ್ಸವಕ್ಕೆ ಬೆಳಗಾಂಗೆ ತೆರಳುವರಷ್ಟೆ. ಅವರ ಸಂಭಾವಿತ ಸ್ವಾಗತ ಕ್ಕಾಗಿ ಹತ್ತು ಮಂದಿಯ ಸಮಿತಿ ಏರ್ಪಾಟಾಗಿದೆ.

ರಿಯಾಯಿತಿ ರದ್ದು

ಉತ್ತರ ಪ್ರದೇಶದಲ್ಲಿ 52 ಮಂದಿ ಗಿದ್ದ ಜಮೀಂದಾರಿ ಕಂದಾಯ: ರಿಯಾಯಿತಿ ಮತ್ತು ಟೆಂಪ್ ಫರವಾಲ ಸಂಸ್ಥಾನದ ರಾಜರು ವಸೂಲು ಮಾಡುತ್ತಿದ್ದ ನಜರಾನಾ ಎಂಬ ನಿರಂಕುಶ ತೆರಿಗೆಯನ್ನು ರದ್ದು ಮಾಡಲಾಗಿದೆ. 21 ಮತ್ತು 30 ರ ಚಳವಳಿಯಲ್ಲಿ ಬ್ರಿಟಿಷರಿಗೆ ಸಹಾಯ ಮಾಡಿದ್ದಕ್ಕಾಗಿ ಈ ಕೃಪೆ ದೊರೆತಿದ್ದಿತು.

ಎಚ್ಚರಿಸಿ ಬಿಡಲಾಯಿತು

ಬೆಂಗಳೂರು ಕಲಾಸಿಪಾಳ್ಯದ ಕಾಲ್ಟೆಕ್ಸ್ ಪೆಟ್ರೋಲು ಬಂಕಿನಿಂದ 23 ನೆ ತಾ|| ಬಾಲಕೃಷ್ಣ ಉರ್ಫ್ ಅಪ್ಪಣ್ಣ ಎಂಬವನು ಕದ್ದು ರೂ. 80 ನೋಟುಗಳನ್ನು ಇಲಿ ಬಿಲದಲ್ಲಿ ವುಚ್ಚಿಟ್ಟಿದ್ದ. ಉಳಿದ ಹಣದಲ್ಲಿ ಅವನು ಕೆಲವು ಸ್ನೇಹನರಿ ಪದಾರ್ಥಗಳನ್ನು ಕೊಂಡಿದ್ದ. ವಯಸ್ಸಿನಲ್ಲಿ ಅವನು ಚಿಕ್ಕವನು. ಇದು ವೊದಲನೆ ಅಪರಾಧ ಆದುದರಿಂದ ಅವನನ್ನು ಎಚ್ಚರಿಕೆ ಕೊಟ್ಟು ಬಿಡಲಾಯಿತು.

ದಿವ್ಯವಾಣಿ

ಪ್ರಪಂಚದ ಉತ್ಪತ್ತಿ ಸ್ಥಿತಿಗಳಿಗೆ ಪ್ರೇಮವೇ ಮೂಲವಾಗಿರುತ್ತದೆ. ಪ್ರೇಮವೇ ಅದರ ಗುರಿಯಾಗಿದ್ದು ಕೊನೆಗೆ ಪ್ರೇಮದಲ್ಲಿಯೇ ಲೀನವಾಗುತ್ತದೆ.

— ಟಾಗೂರ್.

ಕಾರ್ಮಿಕರ ಬೆಂಬಲವಿಲ್ಲ!

ಬರ್ಮಿಯದಲ್ಲಿ ರಾಷ್ಟ್ರೀಯ ಟ್ರೇಡ್ ಯೂನಿಯನ್ ಕಾಂಗ್ರೆಸಿನ ಅಧ್ಯಕ್ಷ ಶ್ರೀ ಹರಿಹರನಾಥಶಾಸ್ತ್ರಿ ಹೇಳಿಕೆಯಿತ್ತು ಸೂಚಿತವಾಗಿರುವ ರೈಲ್ವೆ ಮುಷ್ಕರ ಮುರಿದು ಹೋಗುವದಾಗಿ ತಿಳಿಸಿದ್ದಾರೆ. ಈ ಮುಷ್ಕರ ಪಕ್ಷದ ರಾಜಕೀಯ ಸಾಧನೆಗೋಸ್ಕರ ಪ್ರಯತ್ನ ಆಗಿರುವದರಿಂದ ಕೆಲಸಗಾರರು ಬೆಂಬಲಿಸುವದಿಲ್ಲವೆಂದು ಅವರು ತಿಳಿಸಿರುವರು.

ಮಹಿಳೆಯರಿಗೆ ತಿಳಿವಳಿಕೆಕೊಡಲು

ಇದೇ ಮಾಹೆ 31 ನೆ ತಾ|| ಪಾಕಿಸ್ತಾನದ ಮಹಿಳಾ ಸಂಘದ ಆಶ್ರಯದಲ್ಲಿ ಬಹಿರಂಗ ಸಭೆ ಏರ್ಪಾಟಾಗಿದೆಯೆಂದು ಕರಾಚಿ ವಾರ್ತೆ. ನಗರ ರಕ್ಷಣ ಕಾರ್ಯದಲ್ಲಿ ಮಹಿಳೆಯರಿಗೆ ತಿಳಿವಳಿಕೆ ಕೊಡುವದೇ ಸಭೆಯ ಉದ್ದೇಶ.

ಪಾಕಿಸ್ತಾನ ಒಪ್ಪಬೇಕು

ಬೊಂಬಾಯಿ ಶಾಸನ ಸಭೆ ಸದಸ್ಯ ಗುಲಾಂ ಹೈದರ್ ಮೊವಿ. ಹೈದರಾಬಾದಿನಲ್ಲಿ ಹೇಳಿಕೆ ಇತ್ತು ಪಂ|| ನೆಹರು ರವರ ಸವಿ ನಿರೋಧ ಹೇಳಿಕೆಗೆ ಪಾಕಿಸ್ತಾನ ಒಪ್ಪಬೇಕೆಂದು ತಿಳಿಸಿದ್ದಾರೆ.

ಏರಿಕೆ ಇಲ್ಲ

ಆಗಸ್ಟ್ 1 ರಿಂದ ಪಶ್ಚಿಮ ಬಂಗಾಳದಲ್ಲಿ ಪಡಿತರ ಅಧಿಕ ಮಾಡಲಾಗುವದೆಂದು ತಿಳಿಸಲಾಗಿತ್ತು. ಈಗ ಪಡಿತರ ಹೆಚ್ಚು ಮಾಡಲಾಗುವದಿಲ್ಲವೆಂದು ಕಲ್ಕತ್ತಾದಿಂದ ವಾರ್ತೆ ಬಂದಿದೆ.

ಹೊಟ್ಟೆಗಿಲ್ಲದೆ ಸಾವು

ಬೇಲಾ ಎಂಬ ಗ್ರಾಮದಲ್ಲಿ ಹೊಟ್ಟೆಗಿಲ್ಲದೆ ಒರ್ವ ಸತ್ತಿದ್ದಾನೆ. ಈ ಗ್ರಾಮ ಇರುವದು ಬಿಹಾರಿನ ದರ್ಭಾಂಗದಲ್ಲಿ.

ಶಕ್ತಿಯಿಲ್ಲದೆ ಕೂಗೆಬ್ಬಿಸಿದೆ

ಭಾರತದ ಒಗೆಗೆ ಪಾಕಿಸ್ತಾನ ಅಮೆರಿಕದಲ್ಲಿ ಅಪಪ್ರಚಾರ ನಡೆಸುತ್ತಿದೆ ಭಾರತಕ್ಕೆ ಧಾನ್ಯ ಬಂದಂತೆ ಮಾಡುತ್ತಿದೆ ಭಾರತದೊಡನೆ ಯುದ್ಧ ಮಾಡುವ ಶಕ್ತಿ ಇಲ್ಲದಿದ್ದರೂ ಯುದ್ಧದ ಕೂಗೆಬ್ಬಿಸಿದೆ. ಸಮರ ನಡೆದರೆ ಅದನ್ನೆದುರಿಸುವ ಶಕ್ತಿ ಭಾರತಕ್ಕಿದೆ ಎಂದು ಶ್ರೀ ಕೆ ಎಂ ಮುನಷಿ ಬೊಂಬಾಯಿನಲ್ಲಿ ತಿಳಿಸಿರುವರು

ನಿರಾಶ್ರಿತರು ಬರುತ್ತಿದ್ದಾರೆ

ಪಾಕಿಸ್ತಾನ ಪ್ರಚಾರಕರ ಧರ್ಮಯುದ್ಧ ಘೋಷಣೆಯಿಂದಾಗಿ ಪೂರ್ವ ಪಾಕಿಸ್ತಾನದಿಂದ ಹಿಂದೂ ನಿರಾಶ್ರಿತರು ಕಾಲಾರಿಗೆ ಬರಲಾರಂಭಿಸಿದ್ದಾರೆಂದು ಕರೀಂಗಂಜಿನ ವಾರ್ತೆ

ಭಾರತೀಯರು ನೆಹರು ಸರ್ಕಾರಕ್ಕೆ ಬೆಂಬಲ ಕೊಡಬೇಕೆಂದು ಜರ್ಮನಿ ರೈಕ್ ಬ್ಯಾಂಕಿನ ಮಾಜಿ ಅಧ್ಯಕ್ಷ ಡಾ|| ಷಾಟ್ ಕಲ್ಕತ್ತಾದಲ್ಲಿ ಹೊನ್ನೆ ತಿಳಿಸಿದರು.

ಹಮ್ದಾದ್-ಇ-ಸಹರ್ದಾದ್ ಎಂಬ ದೆಹಲಿಯ ಉರ್ದು ಪತ್ರಿಕೆ ಪಾಕಿಸ್ತಾನಕ್ಕೆ ಒರಕೂಡದೆಂದು ನಿಶೇಧ ಆಜ್ಞೆ ಆಗಿದೆ.

ಭಾಷ್ಯಂರ ಭಾಷಣ

ಹಿಂದೆ, ನನ್ನ ದೇಶದ ಗ್ರಾಮಗಳು ಬಹಳ ಮುಂದುವರಿದು ಪ್ರಗತಿ ಹೊಂದಿದ್ದವು ಈಗ ಪಾಶ್ಚಾತ್ಯ ದೇಶಗಳ ಗ್ರಾಮಗಳು ದಿನದಿನವೂ ಪ್ರಗತಿ ಹೊಂದುತ್ತಿವೆ ಅದಕಾರಣ, ನನ್ನ ನಾಡಿನ ಗ್ರಾಮಗಳು ಮತ್ತೆ ಪ್ರಗತಿ ಹೊಂದಿ ಅಭ್ಯುದಯ ಸಾಧನೆ ಮಾಡುವದು ಅಸಾಧ್ಯವಾದ ಕಾರ್ಯವಲ್ಲ ಆದರೆ ಅದಕ್ಕಾಗಿ ಸಮಸ್ಯರೂ ತಮ್ಮಿಂದ ಸಾಧ್ಯವಿರುವ ಮಟ್ಟಿಗೂ ಶ್ರಮಿಸಿ ಪ್ರಯತ್ನ ಮಾಡಬೇಕು — ಎಂದು ಶ್ರೀ ಕೆ ಟಿ ಭಾಷ್ಯಂ ಅವರು ಮೈಸೂರು ಸಂಸ್ಥಾನದ ಗ್ರಾಮಾಭಿವೃದ್ಧಿ ಯೋಜನೆಗಳು ಎಂಬ ಬಗೆಗೆ ಆಕಾಶವಾಣಿಯಲ್ಲಿ ಭಾಷಣ ಮಾಡುತ್ತಾ ತಿಳಿಸಿರುವರು

ಒಪ್ಪಿಗೆ ಇಲ್ಲ

ಕಮ್ಯುನಿಸ್ಟ್ ಧುರೀಣ ಶ್ರೀ ಎ. ಕೆ. ಗೋಪಾಲ್ ಹೈದರಾಬಾದಿನಲ್ಲಿ ನಿನ್ನೆ ಹೇಳಿಕೆಯಿತ್ತು ತೆಲುಗಾಣ ಕಮ್ಯುನಿಸ್ಟರ ಹಿಂಸಾತ್ಮಕ ಚಳವಳಿಯನ್ನು ಭಾರತ ಕಮ್ಯುನಿಸ್ಟ್ ಪಕ್ಷ ಒಪ್ಪುವದಿಲ್ಲವೆಂದು ತಿಳಿಸಿದ್ದಾರೆ

ಜೋರ್ಡಾನಿನ ರಾಜಕುಮಾರ ಎಮಿರ್ ತಲಾಲರಿಗೆ ತಮ್ಮ ತಂದೆ ಅಬ್ದುಲ್ಲರ ಕೊಲೆಯ ಸುದ್ದಿ ಕೇಳಿದ ನಂತರ ಅರೋಗ್ಯ ಪೂರ್ತಿ ಕೆಟ್ಟಿರುವದಾಗಿ ಜಿನೀವ ವಾರ್ತೆ.

ತುಮಕೂರು ಪೌರಸಭೆ ಮೈಸೂರು ಮಹಾರಾಜರಿಗೆ ಮಾನಪತ್ರ ಕೊಡುವ ನಿರ್ಣಯ ಮಾಡಿದೆ

ನಿಜಲಿಂಗಪ್ಪನವರ ಹೇಳಿಕೆ

ಮೈಸೂರು ರಾಜಪ್ರಮುಖರನ್ನು ಏಕೀಕೃತ ಕರ್ನಾಟಕದ ಘಟನಾತ್ಮಕ ಪ್ರಮುಖರನ್ನಾಗಿ ಒಪ್ಪಿಕೊಳ್ಳುವ ವಿಚಾರದಲ್ಲಿ ಆವ ತರ್ಕವಿತರ್ಕವೂ ಬೇಡ. ಇದಕ್ಕಷ್ಟು ಈಗ ಪ್ರಾಮುಖ್ಯತೆ ಇಲ್ಲ. ಘಟನಾತ್ಮಕ ಗವರ್ನರಿಗಿಂತ ಹೆಚ್ಚಾಗಿ ಮೈಸೂರಿನ ರಾಜಪ್ರಮುಖರು ಇನ್ನೇನು ಪರಿಣಾಮವುಂಟುಮಾಡಲಿಲ್ಲ. ರಾಜಪ್ರಮುಖರಾದರೂ ತಮ್ಮ ಸ್ಥಾನವನ್ನು ಬಹುಬೇಗ ಅರಿತುಕೊಂಡವರಾಗಿರುವರು.

— ಹೀಗೆಂದು ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್. ನಿಜಲಿಂಗಪ್ಪನವರು ಹುಬ್ಬಳ್ಳಿಯಲ್ಲಿ ತಿಳಿಸಿದ್ದಾರೆ.

— ದಕ್ಷಿಣ ಭಾರತದ ಭಾಷಾವಾರು ಪ್ರಾಂತ್ಯ ಪ್ರತಿನಿಧಿಗಳ ಕೂಟ ಬೆಂಗಳೂರಿನಲ್ಲಿ ಸೆಪ್ಟಂಬರ್ ಮೊದಲನೇ ವಾರ ಸೇರಲಿದೆ.

ಅವಕಾಶಕೊಡಲಿಲ್ಲ

ಸ್ಯಾಮ್ಯುಯಲ್ ಲಿಥಿಕೂ ಎಂಬ ಆಫ್ರಿಕಾ ನಿಗ್ರೋವನಿಗೆ ಭಾರತೀಯ ವಿಶ್ವವಿದ್ಯಾನಿಲಯದ ಶಿಷ್ಯವೃತ್ತಿ ದೊರೆತಿದ್ದು ಉಚ್ಚ ಶಿಕ್ಷಣಕ್ಕೆ ದಕ್ಷಿಣ ಆಫ್ರಿಕೆ ಹೊರಗೆ ಹೋಗತಕ್ಕದ್ದಲ್ಲವೆಂದು ಆತನ ಸರ್ಕಾರವು ಅವನನ್ನು ನಿರ್ಬಂಧಿಸಿದೆ. ತನ್ನ ದೇಶದಲ್ಲಿಯೂ ಆತನಿಗೆ ಉಚ್ಚ ಶಿಕ್ಷಣ ದೊರೆಯುವಂತಿಲ್ಲ.

ಕ್ರಮಬದ್ಧವಾಗಿದೆ

ಹಿಂದೂ ಬಡುಸಪತ್ನಿತ್ವ ನಿರೋಧ ಶಾಸನ ಕ್ರಮಬದ್ಧವಿದೆಯೆಂದು ಬೊಂಬಾಯಿ ಶ್ರೇಷ್ಠ ನ್ಯಾಯಾಲಯ ತೀರ್ಪಿತ್ತಿದೆ.

ಪ್ರಕಟವಾಗಲಿದೆ

ಅಖಿಲ ಭಾರತ ಹಿಂದೂಮಹಾಸಭೆ ಇಷ್ಟರಲ್ಲೇ ಅಧಿಕೃತ ಚುನಾವಣೆ ಘೋಷಣೆ ಪ್ರಕಟಮಾಡುವದೆಂದು ಅದರ ಮಹಾ ಕಾರ್ಯದರ್ಶಿ ತಿಳಿಸಿದ್ದಾರೆ.

ಉಡ್‌ಲಾಂಡ್

4 ನೇ ವಾರ

ದುಲ್‌ಖುಷ್ ಪಂಜೋಲಿಯವರ

ನಗೀನಾ

— ಪಾತ್ರ —

ನೂರ್ಜ, ನಾಸಿರ್ ಖಾನ್, ಗೋಪ್

ಪ್ರತಿ ದಿನ 3 ಪ್ರದರ್ಶನಗಳು

OPERA

July 27th

711 Ocean Drive

Filmed Under Police Protection

Starring — Edmund O'brien
Joan Dru, Otto Kruger

— Next —

Elizebeth Ladymead

(Technicolor)



"ಗೋರಕ್ಷಣ"

ಕಾರ್ಯ ಎಲ್ಲೆಲ್ಲೂ ನಡೆಯುತಿದೆ

ರಣಜಿತ್ ಅಮೋಘ 4 ನೇ ವಾರ

ಆಶೋಕಕುಮಾರ್, ನಿಮ್ಮಿ, ದಿಲೀಪಕುಮಾರ್, ನರ್ಗಿಸ್ ನಟಿಸಿರುವ

ದೀದಾರ್ [ಹಿಂದಿ] Deedar

ಪ್ರತಿ ದಿನ 3 ಆಟಗಳು

ಉತ್ತರ ಅಟ್ಲಾಂಟಿಕ್ ಒಪ್ಪಂದ ವ್ಯವಸ್ಥೆಯ ದೇಶಗಳ ರಕ್ಷಣೆಯ ದಳಗಳೊಡನೆ ನೇಮಲು ಅಮೆರಿಕದ ೪ ನೇ ಕಾಲಾಳ್ಪಿಯ ಯೂನಿಟ್ ಹೊರಟಿದೆ.

Edited, Printed and Published by M. S. Krishna Rao
Satyavadi Press, Chamrajpuram Mysore